ಕಾರ್ಯಗಳ ಹಂಚಿಕೆಯನ್ನು ಸೂಚಿಸುವ ನಕ್ಷೆ ಹೊರಡಿಸಲಾಗಿದೆ ಅದರಂತೆ ಪಂಚಾಯತಿ ವ್ಯಾಪ್ತಿಯಲ್ಲಿ ಅಂತರ್‌ಜಲ ರಕ್ಷಣೆ, ಬೀಜಬ್ಯಾಂಕ್, ದೇಶೀಯ ತಳಿಗಳ ರಕ್ಷಣೆ ಮತ್ತು ಎಲ್ಲ ಅಭಿವೃದ್ಧಿ ಯೋಜನೆಗಳನ್ನು ಮಾಡಲು 3 ಹಂತದಲ್ಲಿ ಪಂಚಾಯತಿಗಳಿಗೆ ಅಧಿಕಾರ ನೀಡಲಾಗಿದೆ. ಈ ಕಾರ್ಯಗಳಿಗೆ ಜಿಲ್ಲಾ ಪಂಚಾಯತಿ ಲಿಂಕ್‌ಡಾಕ್ಯುಮೆಂಟ್‌ನಲ್ಲಿ ಅನುದಾನ ಒದಗಿಸಲಾಗುತ್ತದೆ

ಹೊಳೆನರಸೀಪುರದಲ್ಲಿ ರೈಲ್ವೆ ಫ್ಲಾಟ್ ಫಾರಂ/ಶೆಲ್ಟರ್ ನಿರ್ಮಿಸಿವುದು

404(591); ಮಾನ್ಯ ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)

ಅ) ಹಾಸನ ಜಿಲ್ಲೆ, ಹೊಳೆನರಸೀಪುರ ಟೌನ್ ರೈಲ್ವೆ ನಿಲ್ದಾಣದಲ್ಲಿ ಎರಡು ಬದಿಗಳಲ್ಲಿ ಫ್ಲಾಟ್‌ಫಾರಂ ಹಾಗೂ ಶೆಲ್ಟರ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಫ್ಲಾಟ್‌ಫಾರಂ ಮತ್ತು ಶೆಲ್ಟರ್‌ಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಆರ್. ಪಾಟೀಲ್ (ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ರೈಲ್ವೆ ನಿಲ್ದಾಣಗಳ ನಿರ್ಮಾಣ ಹಾಗೂ ನಿರ್ವಹಣೆಯು ರೈಲ್ವೆಯ ವ್ಯಾಪ್ತಿಗೆ ಒಳಪಡುತ್ತದೆ. ಹೊಳೆನರಸೀಪುರ ಟೌನ್ ರೈಲ್ವೆ ನಿಲ್ದಾಣದಲ್ಲಿ ಪ್ರಸ್ತುತ 300 ಮೀ. ಉದ್ದದ 1 ಪ್ಲಾಟ್‌ಫಾರಂ ಹಾಗೂ 55 ಚ. ಮೀ. ಉದ್ದದ ಮೇಲ್ಛಾವಣಿ ಇರುತ್ತದೆ.

ಆ) ಈ ರೈಲ್ವೆ ನಿಲ್ದಾಣಕ್ಕೆ ಕೆಳಕಂಡ ಕಾಮಗಾರಿಗಳು ಮಂಜೂರಾಗಿರುತ್ತದೆಂದು ರೈಲ್ವೆ ಇಲಾಖೆಯು ವರದಿ ಮಾಡಿರುತ್ತದೆ.

1. ಪ್ಲಾಟ್‌ಫಾರಂ–1ರಲ್ಲಿ 96 ಮೀ ಉದ್ದ ಐ.ಆರ್.ಎಸ್. ಪ್ಲಾಟ್‌ಫಾರಂ ಮೇಲ್ಛಾವಣಿಯ ನಿರ್ಮಾಣ

2 ಪ್ಲಾಟ್‌ಫಾರಂ–1ರಲ್ಲಿ ಶೌಚಾಲಯ ನಿರ್ಮಾಣ.

3. ವಿದ್ಯುತ್ ದೀಪದ ವ್ಯವಸ್ಥೆಯೊಂದಿಗೆ ರೈಲ್ವೆ ಲೆವಲ್ ಪ್ಲಾಟ್‌ಫಾರಂ–2ನ್ನು ನಿರ್ಮಾಣ.

ಗ್ರಾಮೀಣ ಪ್ರದೇಶದಲ್ಲಿ ಸ್ನಾನ ಗೃಹ ಸಹಿತ ಶೌಚಾಲಯ ನಿರ್ಮಾಣ

405(502); ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ)

ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಸ್ನಾನ ಗೃಹ ಸಹಿತ ಶೌಚಾಲಯ ನಿರ್ಮಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ, ಇದ್ದಲ್ಲಿ, ಎಂದಿನಿಂದ ಜಾರಿಗೊಳಿಸಲಾಗುವುದು,

ಆ) ಪ್ರಸಕ್ತ ಸಾಲಿನ ಅನುದಾನದಲ್ಲಿ ಈ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ಮೊತ್ತವೆಷ್ಟು, ಪ್ರತಿ ಘಟಕಕ್ಕೆ ನಿಗದಿಪಡಿಸಿರುವ ಮೌಲ್ಯವೇನು;

ಇ) ರಾಜ್ಯದಲ್ಲಿ ಹಾಲಿ ನಿರ್ಮಿಸಲಾಗಿರುವ ಶೌಚಾಲಯಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ಕರ್ನಾಟಕ ಮೂಲ ಸೌಕರ್ಯ ಅಭಿವೃದ್ಧಿ ನಿಗಮಕ್ಕೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನವೆಷ್ಟು, ಈ ನಿಗಮದ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಮುಖ್ಯ ಯೋಜನೆಗಳಾವುವು?

ಶ್ರೀ ಎಚ್ ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು)

ಅ) ರಾಜ್ಯದಲ್ಲಿ ಸ್ನಾನ ಗೃಹ ಸಹಿತ ಶೌಚಾಲಯ ನಿರ್ಮಿಸುವ ಕುರಿತು, ಪ್ರಾಯೋಗಿಕ ಯೋಜನೆ (Pilot Project) ಹಮ್ಮಿಕೊಳ್ಳಲು ಪ್ರಸ್ತಾವನೆ ಸಿದ್ಧವಡಿಸಿ ಯೋಜನೆ ಇಲಾಖೆಗೆ ಹಾಗೂ ಆರ್ಥಿಕ ಇಲಾಖೆಯ ಅಭಿಪ್ರಾಯ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ